**ಕರ್ನಾಟಕ ಸರ್ಕಾರ**

ಸಂಖ್ಯೆ: ಕಾಶಿಇ/196/ಸುತ್ತೋಲೆ/ಪಿಂಚಣಿ/2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 15/07/2016

**ಸುತ್ತೋಲೆ**

ವಿಷಯ: ನಿವೃತ್ತ ನೌಕರರುಗಳ ಪಿಂಚಣಿ ಪ್ರಸ್ತಾವನೆಯನ್ನು ಕಳುಹಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಸುತ್ತೋಲೆಗಳು ಸಂಖ್ಯೆ: ಕಾಶಿಇ/312/ಸುತ್ತೋಲೆ/ಪಿಂಚಣಿ/2010-11 ದಿನಾಂಕಗಳು: 24/01/2011, 14/10/2011 ಹಾಗೂ 21/02/2012.

2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಕಾಶಿಇ/ಪಿಂಚಣಿ/91/ಸುತ್ತೋಲೆ/2013-14 ದಿನಾಂಕ: 23/09/2013.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಹಾಗೂ ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಸುವುದೇನೆಂದರೆ ತಮ್ಮ ಕಾಲೇಜು/ಕಛೇರಿಗಳಿಂದ ವಯೋನಿವೃತ್ತಿ ಹೊಂದುವ ಸಿಬ್ಬಂದಿ ವರ್ಗದವರುಗಳ ಪಿಂಚಣಿ ಪ್ರಸ್ತಾವನೆಯನ್ನು ಸಂಬಂಧಿಸಿದವರಿಗೆ ವಿಳಂಬವಾಗಿ ಸಲ್ಲಿಸುತ್ತಿರುವ ಕಾರಣ ನಿವೃತ್ತರಿಗೆ ಪಿಂಚಣಿ ಮಂಜೂರಾತಿಯಲ್ಲಿ ವಿಳಂಬವಾಗುತ್ತಿದ್ದು, ಇದರಿಂದ ಪಿಂಚಣಿದಾರರಿಗೆ ಅನಾವಶ್ಯಕವಾಗಿ ತೊಂದರೆಯಾಗುತ್ತಿರುವುದು ಕಂಡುಬಂದಿದೆ. ಈ ಕುರಿತಂತೆ ಅನೇಕ ಬಾರಿ ಸೂಚನೆಗಳನ್ನು ನೀಡಿ ಸುತ್ತೋಲೆಗಳನ್ನು ಕಳುಹಿಸಿದ್ದಾಗ್ಯೂ ಕೂಡ ಅವುಗಳನ್ನು ಪಾಲಿಸುತ್ತಿಲ್ಲದಿರುವುದು ಗಮನಕ್ಕೆ ಬಂದಿರುತ್ತದೆ. ನಿವೃತ್ತಿ ಹೊಂದುವವರಿಗೆ **'ನಿವೃತ್ತಿ ದಿನದಂದೇ ಪಿಂಚಣಿ ಮಂಜೂರಾತಿ ಆದೇಶ'** ನೀಡುವ ನಿಟ್ಟಿನಲ್ಲಿ ಕೆಳಕಂಡಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ:

1. ಕಾಲೇಜು/ಕಛೇರಿಯಲ್ಲಿ ವಯೋನಿವೃತ್ತಿ ಹೊಂದಲಿರುವ ಸಿಬ್ಬಂದಿ ವರ್ಗದವರುಗಳ ಪಿಂಚಣಿ ಪ್ರಸ್ತಾವನೆಯನ್ನು ನಿವೃತ್ತಿ ದಿನಾಂಕದ **ಕನಿಷ್ಠ ಆರು ತಿಂಗಳುಗಳ ಪೂರ್ವದಲ್ಲಿ** ಮಹಾಲೇಖಪಾಲರ ಕಛೇರಿಗೆ ರವಾನಿಸತಕ್ಕದ್ದು. (ಸರ್ಕಾರಿ ಆದೇಶ ಸಂಖ್ಯೆ: ಆಇ(ವಿ) 63 ಸಿಪಿಪಿ 83 ದಿ: 18/09/1984)

2. ಈ ಹಿಂದಿನ ಅವಧಿಗಳಲ್ಲಿ ಉಪನ್ಯಾಸಕರು ಕಾಲೇಜು ಪ್ರಾಂಶುಪಾಲರಾಗಿ/ ಪ್ರಭಾರ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿರುವ/ ನಿರ್ವಹಿಸಿದ್ದು, ವಯೋನಿವೃತ್ತಿ ಹೊಂದಲಿರುವವರ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಮತ್ತು ಉಳಿದ ಎಲ್ಲಾ ಸಿಬ್ಬಂದಿವರ್ಗದವರುಗಳ ಪ್ರಸ್ತಾವನೆಯನ್ನು ನೇರವಾಗಿ ಮಹಾಲೇಖಪಾಲರ ಕಛೇರಿಗೆ – ನಿವೃತ್ತಿ ದಿನಾಂಕದ ಆರು ತಿಂಗಳುಗಳ ಪೂರ್ವದಲ್ಲಿ ಕಡ್ಡಾಯವಾಗಿ ರವಾನಿಸತಕ್ಕದ್ದು.

3. ಅ) ವಯೋನಿವೃತ್ತಿ ಹೊಂದುತ್ತಿರುವ ಪ್ರಭಾರ ಪ್ರಾಂಶುಪಾಲರು/ ಪ್ರಾಂಶುಪಾಲರುಗಳು ಪಿಂಚಣಿ ಪ್ರಸ್ತಾವನೆಯಲ್ಲಿ **ಮುಂದೆ ಲೆಕ್ಕತಪಾಸಣೆ ಕಾರ್ಯ ಪೂರ್ಣಗೊಂಡ ನಂತರ ವ್ಯತ್ಯಾಸ ಮೊತ್ತವಿರುವುದು ಕಂಡು ಬಂದಲ್ಲಿ ಸದರಿ ಮೊತ್ತವನ್ನು ಪಾವತಿ ಮಾಡಲು ತಾವೇ ಹೊಣೆಗಾರರಾಗಿರುವ**" ಬಗ್ಗೆ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು .

   **ಮತ್ತು**

   ಆ) ಪ್ರಭಾರ ಪ್ರಾಂಶುಪಾಲರಾಗಿ/ಮತ್ತು ಪ್ರಾಂಶುಪಾಲರು ಗ್ರೇಡ್-Iರಾಗಿ ಸೇವೆ ಸಲ್ಲಿಸಿರುವ ಅವಧಿಯ ಬಗ್ಗೆ ಮತ್ತು ಕಾಲೇಜುಗಳ ವಿವರಗಳನ್ನು ಕೂಡ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

4. ನಿವೃತ್ತಿ ಹೊಂದಲಿರುವ/ ಹೊಂದಿರುವ ಪ್ರಾಂಶುಪಾಲರುಗಳು ತಾವು ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿರುವ ಕಾಲೇಜುಗಳ ಲೆಕ್ಕತಪಾಸಣೆಯಲ್ಲಿ ಕಂಡುಬಂದ ಆಕ್ಷೇಪಣೆಗಳ ಇತ್ಯರ್ಥದ ಬಗ್ಗೆ ನಿಗದಿತ ಸಮಯದಲ್ಲಿ ಸೂಕ್ತ ಕ್ರಮಕೈಗೊಳ್ಳದಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಇದರಿಂದಾಗಿ ತಡೆ ಹಿಡಿದಿರುವ ಸೇವಾ ಉಪದಾನದ ಬಿಡುಗಡೆಯಲ್ಲಿ ಅನಗತ್ಯ ವಿಳಂಬವಾಗುತ್ತಿದೆ. ಆದುದರಿಂದ ಲೆಕ್ಕತಪಾಸಣೆಯ ಆಕ್ಷೇಪಣೆಗಳ ಬಗ್ಗೆ ಜರೂರು ಕ್ರಮ ಕೈಗೊಂಡು ಅನುಸರಣಾ ವರದಿ ನೀಡಲು/ಬಾಕಿ ಇದ್ದಲ್ಲಿ ಸಂಬಂಧಿಸಿದ ಸರ್ಕಾರದ ಖಾತೆಗೆ ಜಮಾ ಮಾಡಿದ ಬಗ್ಗೆ ದೃಢೀಕೃತ ಚಲನ್ ಲಗತ್ತಿಸಿ ಪ್ರಸ್ತಾವನೆಯೊಂದಿಗೆ ಕಳುಹಿಸಲು ಹಾಗೂ ಲೆಕ್ಕ ತಪಾಸಣಾ ವಿಭಾಗಕ್ಕೆ ವರದಿ ನೀಡಲು ಎಲ್ಲಾ ಪ್ರಾಂಶುಪಾಲರುಗಳಿಗೆ ಕಟ್ಟುನಿಟ್ಟಾಗಿ ಸೂಚನೆ ನೀಡಿದೆ.

5. ಪ್ರಭಾರ ಪ್ರಾಂಶುಪಾಲರು ಮತ್ತು ಪ್ರಾಂಶುಪಾಲರು ಗ್ರೇಡ್-I ಪಿಂಚಣಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವಾಗ ಮಹಾಲೇಖಪಾಲರಿಗೆ ಮೂರು ಪ್ರಸ್ತಾವನೆಗಳ ಪ್ರತಿಗಳು ಕಳುಹಿಸಲು ಅನುವಾಗುವಂತೆ ಒಟ್ಟು ನಾಲ್ಕು ಪ್ರಸ್ತಾವನೆಗಳ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

6. ಅನುದಾನಿತ ಕಾಲೇಜುಗಳನ್ನು ಸೆಪ್ಟೆಂಬರ್ 1986ರ ಪೂರ್ವದಲ್ಲಿ ಸರ್ಕಾರವು ವಶಪಡಿಸಿಕೊಂಡಿದ್ದಲ್ಲಿ, ಅಂತಹ ಕಾಲೇಜಿನ ಸಿಬ್ಬಂದಿಯವರ ಭವಿಷ್ಯ ನಿಧಿ ಖಾತೆಯನ್ನು ಮುಕ್ತಾಯಗೊಳಿಸುವ ಸಂಬಂಧ ಅಂತಹ ಸಿಬ್ಬಂದಿಗಳ ತಿಂಗಳುವಾರು ವಂತಿಕೆ ಹಾಗೂ ವಾರ್ಷಿಕ 5.5% ಚಕ್ರ ಬಡ್ಡಿಯಂತೆ ಲೆಕ್ಕ ಹಾಕಲಾಗಿರುವ ಲೆಕ್ಕಾಚಾರ ಪಟ್ಟಿಯನ್ನೊಳಗೊಂಡಂತೆ ಭವಿಷ್ಯ ನಿಧಿ ಖಾತೆ ಮುಕ್ತಾಯಕ್ಕಾಗಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಕಳುಹಿಸತಕ್ಕದ್ದು.

7. ಸರ್ಕಾರವು ವಶಪಡಿಸಿಕೊಂಡಿರುವ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿರುವ ಎಲ್ಲಾ ಸಿಬ್ಬಂದಿಯವರ ಸೇವಾಪುಸ್ತಕಗಳಲ್ಲಿ ಟಿ.ಬಿ.ಎಸ್. ಪ್ರಮಾಣ ಪತ್ರಗಳನ್ನು ವಶಪಡಿಸಿಕೊಂಡ ಕಾಲೇಜಿನ ಪ್ರಾಂಶುಪಾಲರು ನಮೂದಿಸಿ, ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಮೇಲುರುಜು ಮಾಡಿಸಿ ಸಂಬಂಧಿಸಿದವರಿಗೆ ಪಿಂಚಣಿ ಪ್ರಸ್ತಾವನೆ ಕಳುಹಿಸಲು ಸೂಚಿಸಲಾಗಿದೆ.

8. ನಿವೃತ್ತಿ ಹೊಂದುವ ಸಿಬ್ಬಂದಿಗಳು ಹಾಗೂ ಪ್ರಾಂಶುಪಾಲರುಗಳು ಎಂ.ಸಿ.ಎ./ಹೆಚ್.ಬಿ.ಎ./ ಕಂಪ್ಯೂಟರ್ ಅಡ್ವಾನ್ಸ್ ಪಡೆದಿದ್ದಾರೆಯೇ? ಅಥವಾ ಇಲ್ಲವೇ?/ ಪಡೆದಿದ್ದಲ್ಲಿ ತೀರುವಳಿ ಆಗಿದೆಯೇ? ಎಂಬ ಬಗ್ಗೆ ಸ್ವಯಂ ದೃಢೀಕರಣವನ್ನು ಪಡೆದು ಪಿಂಚಣಿ ಪ್ರಸ್ತಾವನೆಯಲ್ಲಿ ಸಲ್ಲಿಸತಕ್ಕದ್ದು. ತೀರುವಳಿಯಾಗಿದ್ದಲ್ಲಿ ತೀರುವಳಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ ಲಗತ್ತಿಸತಕ್ಕದ್ದು.

9. ಪ್ರಭಾರ ಪ್ರಾಂಶುಪಾಲರುಗಳ/ ಪ್ರಾಂಶುಪಾಲರುಗಳ ಗಳಿಕೆ ರಜೆ ನಗದೀಕರಣದ ಪ್ರಸ್ತಾವನೆ ಜಂಟಿ ನಿರ್ದೇಶಕರುಗಳ ಮೂಲಕ ಈ ಕಛೇರಿಗೆ ಕಳುಹಿಸಿಕೊಡತಕ್ಕದ್ದು.

**ಸಾಮೂಹಿಕ ವಿಮೆ ಮೊತ್ತ ಮಂಜೂರಾತಿ ಮಾಡುವಾಗ ಕೆಳಕಂಡ ಅಂಶಗಳನ್ನು ಪರಿಗಣಿಸಲು ಸೂಚಿಸಲಾಗಿದೆ:**

1. ಸಾಮೂಹಿಕ ವಿಮೆ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವಾಗ **ಸೇವೆ ಸಲ್ಲಿಸಿರುವ ಎಲ್ಲಾ ಕಾಲೇಜು/ ಕಛೇರಿಗಳ ಮುಖ್ಯಸ್ಥರಿಂದ ಜಿ.ಐ.ಎಸ್. ಕಂತು ಕಟಾವಣೆ ಬಗ್ಗೆ ವಿವರಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು** ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

2. ವರ್ಷದ ಮಧ್ಯದಲ್ಲಿ ಸೇವೆಗೆ ನೇಮಕಾತಿ ಹೊಂದಿರುವ ಸಿಬ್ಬಂದಿ ವರ್ಗದವರ ಸಾಮೂಹಿಕ ವಿಮೆ ಮೊತ್ತವನ್ನು ಲೆಕ್ಕ ಹಾಕುವಾಗ ಮುಂದಿನ ವರ್ಷದ ಜನವರಿಯಿಂದ ಯೋಜನೆಗೆ ಸೇರ್ಪಡೆಯಾಗಿರುವಂತೆ ಪರಿಗಣಿಸಿ ಲೆಕ್ಕ ಹಾಕತಕ್ಕದ್ದು. ಹಾಗೂ ಸಿಬ್ಬಂದಿಯು ಬಡ್ತಿ ಹೊಂದಿ ವೃಂದ ಬದಲಾವಣೆ ಹೊಂದಿರುವ ಸಂದರ್ಭದಲ್ಲಿ ಕೂಡಾ ಮುಂದಿನ ವರ್ಷದ ಜನವರಿಯಿಂದ ಬದಲಾವಣೆಗೊಂಡ ವೃಂದಕ್ಕೆ ಸೇರ್ಪಡೆಯಾಗಿರುವಂತೆ ಪರಿಗಣಿಸತಕ್ಕದ್ದು.

3. ಸರ್ಕಾರವು ವಹಿಸಿಕೊಂಡಿರುವ ಕಾಲೇಜುಗಳ ಸಿಬ್ಬಂದಿ ವರ್ಗದವರುಗಳ ಪ್ರಕರಣದಲ್ಲಿ ಸರ್ಕಾರವು ಕಾಲೇಜನ್ನು ವಹಿಸಿಕೊಂಡ ದಿನಾಂಕದ ನಂತರ ಬರುವ ವರ್ಷದ ಜನವರಿಯಿಂದ ಸಿಬ್ಬಂದಿಯವರು ಯೋಜನೆಗೆ ಸೇರ್ಪಡೆಯಾಗಿರುವಂತೆ ಪರಿಗಣಿಸಿ ವಿಮೆ ಮೊತ್ತ ಲೆಕ್ಕ ಹಾಕತಕ್ಕದ್ದು. ಹಾಗೂ ಸ್ಥಳೀಯ ಅಭ್ಯರ್ಥಿಯಾಗಿ (local candidate)/ ಕರಾರು ಆಧಾರಿತ (contract basis service) ಸೇವೆ ಸಲ್ಲಿಸಿದ ಬೋಧಕ/ ಬೋಧಕೇತರ ನೌಕರರ ಪ್ರಕರಣಗಳಲ್ಲಿ ಸೇವಾ ಸಕ್ರಮಾತಿಗೊಂಡ ನಂತರದ ವರ್ಷದ ಜನವರಿಯಿಂದ ಸಿಬ್ಬಂದಿಯವರು ಯೋಜನೆಗೆ ಸೇರ್ಪಡೆಯಾಗಿರುವಂತೆ ಪರಿಗಣಿಸಿ ವಿಮೆ ಮೊತ್ತ ಲೆಕ್ಕ ಹಾಕತಕ್ಕದ್ದು.

**ಷರಾ:** **ಪಿಂಚಣಿ ಪ್ರಸ್ತಾವನೆಗಳನ್ನು ಆರು ತಿಂಗಳು ಪೂರ್ವದಲ್ಲಿ ರವಾನಿಸದಿದ್ದಲ್ಲಿ ಪಿಂಚಣಿ ಮಂಜೂರಾತಿಯಲ್ಲಿ ಆಗುವ ವಿಳಂಬಗಳಿಗೆ ಸಂಬಂಧಿಸಿದ ಪ್ರಾಂಶುಪಾಲರು/ ಜಂಟಿ ನಿರ್ದೇಶಕರನ್ನೇ ನೇರ ಹೊಣೆಗಾರರೆಂದು ಪರಿಗಣಿಸಲಾಗುವುದು.**

ಕಾಲೇಜು ಶಿಕ್ಷಣ ನಿರ್ದೇಶಕರು(ಪ್ರ)

**ಇವರಿಗೆ:**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಹಾಗೂ ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಗುಲ್ಬರ್ಗಾ, ಶಿವಮೊಗ್ಗ ಹಾಗೂ ಧಾರವಾಡ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಹೆಚ್ಚುವರಿ ಪ್ರತಿ.
4. ಕಛೇರಿ ಪ್ರತಿ.

**ಪ್ರತಿಯನ್ನು:**

1. ಆಡಳಿತಾಧಿಕಾರಿಗಳು, ಸಾಮೂಹಿಕ ವಿಮಾ ಯೋಜನೆ ಮತ್ತು ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ:ಅಂಬೇಡ್ಕರ್ ವೀದಿ, ಬೆಂಗಳೂರು – 560 001 – ಮಾಹಿತಿಗಾಗಿ.
2. ಆಯುಕ್ತರ/ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಯವರ/ಜಂಟಿ ನಿರ್ದೇಶಕರುಗಳ ಆಪ್ತ ಸಹಾಯಕರು, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿಗಾಗಿ.
3. ಗೆಜೆಟೆಡ್ ಮ್ಯಾನೇಜರ್/ಅಧೀಕ್ಷಕರುಗಳು, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿಗಾಗಿ.
4. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾ.ಶಿ.ಇ., ಬೆಂಗಳೂರು – ಮಾಹಿತಿ ಹಾಗೂ ಈ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
5. ಹೆಚ್ಚುವರಿ ಪ್ರತಿ.
6. ಕಛೇರಿ ಪ್ರತಿ.

196, Circular Pension Proposal (Govt)

**ಕರ್ನಾಟಕ ಸರ್ಕಾರ**

ಸಂಖ್ಯೆ:ಕಾಶಿಇ/196/ಸುತ್ತೋಲೆ/ಪಿಂಚಣಿ/2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:15/07/2016

**ಸುತ್ತೋಲೆ**

ವಿಷಯ: ನಿವೃತ್ತ ನೌಕರರುಗಳ ಪಿಂಚಣಿ ಪ್ರಸ್ತಾವನೆಯನ್ನು ಕಳುಹಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ: ಕಾಶಿಇ/ಪಿಂಚಣಿ/71/ ಸುತ್ತೋಲೆ/2015-16 ದಿನಾಂಕ: 30/07/2015.

*******

ಎಲ್ಲಾ ಅನುದಾನಿತ ಪದವಿ, ಬಿ.ಎಡ್ ಹಾಗೂ ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ/ ಆಡಳಿತ ಮಂಡಳಿಯವರಿಗೆ ತಿಳಿಸುವುದೇನೆಂದರೆ ಅನುದಾನಿತ ಕಾಲೇಜುಗಳಿಂದ ವಯೋನಿವೃತ್ತಿ ಹೊಂದುವ ಸಿಬ್ಬಂದಿ ವರ್ಗದವರಿಗೆ ನಿವೃತ್ತಿ ದಿನಾಂಕದಿಂದ ಸುಮಾರು ಆರು ತಿಂಗಳುಗಳಿಂದ ಒಂದು ವರ್ಷದ ಅವಧಿಯಲ್ಲಿ ಪಿಂಚಣಿ ಮಂಜೂರಾತಿ ಆಗುತ್ತಿದ್ದು, ಇದರಿಂದ ಪಿಂಚಣಿದಾರರಿಗೆ ಅನವಶ್ಯಕವಾಗಿ ತೊಂದರೆಯಾಗುತ್ತಿರುವುದು ಕಂಡುಬಂದಿದೆ. ಈ ಕುರಿತಂತೆ ಹಲವಾರು ಬಾರಿ ಸೂಚನೆಗಳನ್ನು ನೀಡಿ ಸುತ್ತೋಲೆಗಳನ್ನು ಕಳುಹಿಸಿದ್ದಾಗ್ಯೂ ಕೂಡ ಅವುಗಳನ್ನು ಪಾಲಿಸುತ್ತಿಲ್ಲದಿರುವುದು ಗಮನಕ್ಕೆ ಬಂದಿರುತ್ತದೆ.

ನಿವೃತ್ತಿ ಹೊಂದುವವರಿಗೆ **'ನಿವೃತ್ತಿ ದಿನದಂದೇ ಪಿಂಚಣಿ ಮಂಜೂರಾತಿ ಆದೇಶ'** ನೀಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವ ಸಂಬಂಧ ವಿವರವಾದ ಮಾಹಿತಿ ಹಾಗೂ ಸೂಚನೆಗಳನ್ನು ಉಲ್ಲೇಖಿತ ಈ ಕಛೇರಿಯ ಸುತ್ತೋಲೆಯಲ್ಲಿ ಹಾಗೂ ಅದಕ್ಕೂ ಪೂರ್ವದಲ್ಲಿ ಇತರೆ ಸುತ್ತೋಲೆಗಳಲ್ಲಿ ನೀಡಲಾಗಿದ್ದು, ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿರುವುದು ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಉಲ್ಲೇಖಿತ ಸುತ್ತೋಲೆಯಲ್ಲಿ ಹಾಗೂ ಈ ಸುತ್ತೋಲೆಯಲ್ಲಿ ತಿಳಿಸಿರುವಂತೆ ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಲಾಗಿದೆ. ಇಲ್ಲದಿದ್ದಲ್ಲಿ ಇದನ್ನು ಗಂಭೀರವಾಗಿ ಪರಿಗಣಿಸಲಾಗುವುದು.

1. ವಯೋನಿವೃತ್ತಿ ಹೊಂದಲಿರುವ ಸಿಬ್ಬಂದಿ ವರ್ಗದವರ ಪರಿಪೂರ್ಣ ಪಿಂಚಣಿ ಪ್ರಸ್ತಾವನೆಯನ್ನು ಸೇವಾಪುಸ್ತಕದೊಂದಿಗೆ ನಿವೃತ್ತಿ ದಿನಾಂಕದ ಕನಿಷ್ಠ ಮೂರು ತಿಂಗಳು ಮುಂಚಿತವಾಗಿ ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಪರಿಶೀಲನೆಗಾಗಿ ಹಾಗೂ ಮೇಲುರುಜು ಮಾಡುವುದಕ್ಕಾಗಿ ರವಾನಿಸತಕ್ಕದ್ದು.
2. ಪಿಂಚಣಿ ಪ್ರಸ್ತಾವನೆಯನ್ನು ಸಲ್ಲಿಸುವಾಗ ಮಹಾಲೇಖಪಾಲರಿಗೆ ಮೂರು ಪ್ರಸ್ತಾವನೆಗಳನ್ನು ಕಳುಹಿಸಲು ಅನುವಾಗುವಂತೆ ಒಟ್ಟು ನಾಲ್ಕು ಪ್ರಸ್ತಾವನೆಗಳನ್ನು ಕಡ್ಡಾಯವಾಗಿ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
3. ಪಿಂಚಣಿ ಪ್ರಸ್ತಾವನೆಗಳ ಜೊತೆಗೆ Pension Data Input Sheet ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು.
4. ಪಿಂಚಣಿ ಪ್ರಸ್ತಾವನೆಯಲ್ಲಿ ಲಗತ್ತಿಸಿರುವ ಜಂಟಿ ಭಾವಚಿತ್ರಗಳ ಮೇಲೆ ಕಾಲೇಜು ಪ್ರಾಂಶುಪಾಲರು/ ಆಡಳಿತ ಮಂಡಳಿಯ ಕಾರ್ಯದರ್ಶಿಗಳು ದೃಢೀಕರಿಸತಕ್ಕದ್ದು(Attest across the Photo).

5. ಸಿಬ್ಬಂದಿಯು ನಿವೃತ್ತಿ ಹೊಂದಿದ ನಂತರ ಅವರ **ಅಂತಿಮ ವೇತನ ಪ್ರಮಾಣ ಪತ್ರ ಮತ್ತು ಬೇಬಾಕಿ ಪ್ರಮಾಣ ಪತ್ರವನ್ನು (ತ್ರಿಪ್ರತಿಗಳಲ್ಲಿ) ನೇರವಾಗಿ ಕೇಂದ್ರ ಕಛೇರಿ, ಬೆಂಗಳೂರು, ಇಲ್ಲಿಗೆ ಕಳುಹಿಸತಕ್ಕದ್ದು.**
6. ವಯೋನಿವೃತ್ತಿ ಹೊಂದುತ್ತಿರುವ ಪ್ರಭಾರ ಪ್ರಾಂಶುಪಾಲರು/ ಪ್ರಾಂಶುಪಾಲರುಗಳು ಪಿಂಚಣಿ ಪ್ರಸ್ತಾವನೆಯಲ್ಲಿ "**ಮುಂದೆ ಲೆಕ್ಕತಪಾಸಣೆ ಕಾರ್ಯ ಪೂರ್ಣಗೊಂಡ ನಂತರ ವ್ಯತ್ಯಾಸ ಮೊತ್ತವಿರುವುದು ಕಂಡು ಬಂದಲ್ಲಿ ಸದರಿ ಮೊತ್ತವನ್ನು ಪಾವತಿ ಮಾಡಲು ತಾವೇ ಹೊಣೆಗಾರರಾಗಿರುವ**" ಬಗ್ಗೆ ಆಡಳಿತ ಮಂಡಳಿಯ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
7. ದಿನಾಂಕ:05-09-1986ರ ಪೂರ್ವದಲ್ಲಿ ಸೇವೆಗೆ ನೇಮಕಾತಿ ಹೊಂದಿದ ಅನುದಾನಿತ ಸಿಬ್ಬಂದಿಗಳ ಭವಿಷ್ಯ ನಿಧಿ ಖಾತೆ ಮುಕ್ತಾಯವಾಗಿಲ್ಲದ ಪಕ್ಷದಲ್ಲಿ ಅಂತಹ ಎಲ್ಲಾ ಸಿಬ್ಬಂದಿಗಳ ಭವಿಷ್ಯ ಖಾತೆ ಮುಕ್ತಾಯಕ್ಕಾಗಿ ಪ್ರಸ್ತಾವನೆಯನ್ನು ಶೀಘ್ರವಾಗಿ ಕೇಂದ್ರ ಕಛೇರಿಗೆ ರವಾನಿಸತಕ್ಕದ್ದು.
8. ಭವಿಷ್ಯನಿಧಿ ಖಾತೆ ಮುಕ್ತಾಯಕ್ಕೆ ಸ್ವೀಕೃತವಾಗುವ ಪ್ರಸ್ತಾವನೆಗಳಲ್ಲಿ ಸಾಮಾನ್ಯ ಬಡ್ಡಿಯನ್ನು ಲೆಕ್ಕ ಹಾಕುತ್ತಿದ್ದು, 5.5%ರಂತೆ ಚಕ್ರಬಡ್ಡಿಯನ್ನು ಲೆಕ್ಕ ಹಾಕಲು ಸೂಚಿಸಲಾಗಿದೆ.
9. ಸೇವಾವಹಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕವನ್ನು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ, ಪ್ರಾಂಶುಪಾಲರು ಕಡ್ಡಾಯವಾಗಿ ದೃಢೀಕರಿಸತಕ್ಕದ್ದು.
10. ಅನುದಾನಿತ ಕಾಲೇಜುಗಳ ಸಿಬ್ಬಂದಿಗಳ ಸೇವಾಪೂರ್ವ ಅವಧಿ ಘೋಷಣೆಯಾಗಿರುವ ಬಗ್ಗೆ ಸೂಕ್ತ ಆದೇಶದೊಂದಿಗೆ ನಮೂದುಗಳನ್ನು ಸೇವಾವಹಿಯಲ್ಲಿ ಕಡ್ಡಾಯವಾಗಿ ದಾಖಲಿಸತಕ್ಕದ್ದು.
11. ಸೇವಾವಹಿಯಲ್ಲಿನ ನಮೂದುಗಳನ್ನು ಪ್ರತಿ ವರ್ಷ ಕಾಲೇಜು ಪ್ರಾಂಶುಪಾಲರು ಹಾಗೂ ಸಿಬ್ಬಂದಿಗಳು ದೃಢೀಕರಿಸತಕ್ಕದ್ದು.
12. ಅನುದಾನಿತ ಕಾಲೇಜುಗಳ ಉಪನ್ಯಾಸಕರು ಸ್ಟಾಫ್ ಗ್ಯಾಪ್ ಸಕ್ರಮಾತಿ ಹೊಂದಿರುವ ಪಕ್ಷದಲ್ಲಿ ಈ ಸಂಬಂಧ ಆದೇಶದ ಪ್ರತಿಯನ್ನು ಸೇವಾವಹಿಯಲ್ಲಿ ಲಗತ್ತಿಸಿ, ದಾಖಲೆಗಳನ್ನು ಸೇವಾವಹಿಯಲ್ಲಿ ನಮೂದಿಸತಕ್ಕದ್ದು.
13. ಬೋಧಕೇತರ ಸಿಬ್ಬಂದಿಗಳಿಗೆ ಕಾಲಮಿತಿ ವೇತನ ಬಡ್ತಿ (ಟಿ.ಬಿ.ಎ), ಕಾಲಬದ್ಧ ವೇತನ ಬಡ್ತಿ (ಟಿ.ಬಿ.ಪಿ.), 20, 25, 30ವರ್ಷಗಳ ಹೆಚ್ಚುವರಿ ವೇತನ ಬಡ್ತಿಗಳನ್ನು ಹಾಗೂ ಸ್ಥಗಿತವೇತನ ಬಡ್ತಿಗಳನ್ನು ಮಂಜೂರು ಮಾಡಿರುವ ಬಗ್ಗೆ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಆದೇಶವನ್ನು ಸೇವಾವಹಿಯಲ್ಲಿ ಲಗತ್ತಿಸಿ, ಈ ಬಗ್ಗೆ ನಮೂದುಗಳನ್ನು ಸೇವಾವಹಿಯಲ್ಲಿ ದಾಖಲಿಸಿ ಪ್ರಾಂಶುಪಾಲರು ದೃಢೀಕರಿಸತಕ್ಕದ್ದು.
14. ಒಂದೇ ಆಡಳಿತ ಮಂಡಳಿಯ ಅಥವಾ ಬೇರೆ ಬೇರೆ ಆಡಳಿತ ಮಂಡಳಿಗಳ ಕಾಲೇಜುಗಳಲ್ಲಿ ಅನುದಾನಿತ ಸೇವೆಗಳನ್ನು ಸಲ್ಲಿಸಿದ ಪಕ್ಷದಲ್ಲಿ, ಪ್ರತಿ ಕಾಲೇಜಿನ ಸೇವೆಗೆ ಸಂಬಂಧಿಸಿದಂತೆ, ಪ್ರತ್ಯೇಕವಾಗಿ ಟಿ.ಬಿ.ಎಸ್.ಪ್ರಮಾಣ ಪತ್ರಗಳನ್ನು ನಮೂದಿಸಿ, ಅದರಲ್ಲಿ ಕಾಲೇಜು ವೇತನಾನುದಾನಕ್ಕೊಳಪಟ್ಟ ದಿನಾಂಕ ಮತ್ತು ವಿಷಯ/ ಹುದ್ದೆ ಅನುದಾನಕ್ಕೊಳಪಟ್ಟ ದಿನಾಂಕಗಳನ್ನು ಸ್ಪಷ್ಟವಾಗಿ ನಮೂದಿಸಿ, ಪ್ರಾಂಶುಪಾಲರು ದೃಢೀಕರಿಸಿ ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಮೇಲುರುಜು ಮಾಡಿಸತಕ್ಕದ್ದು.
15. ಎಲ್.ಐ.ಸಿ.ಪಾಲಿಸಿಗಳು ಮೆಚೂರ್(Mature) ಆಗಿದ್ದರೂ ಸಹ ಅವುಗಳ ಸಂಖ್ಯೆ ಹಾಗೂ ಪ್ರೀಮಿಯಮ್ ಮೊತ್ತದ ವಿವರಗಳನ್ನು ಟಿ.ಬಿ.ಎಸ್. ಪ್ರಮಾಣ ಪತ್ರಗಳಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

16. ಒಂದು ಅನುದಾನಿತ ಕಾಲೇಜಿನಿಂದ ಇನ್ನೊಂದು ಅನುದಾನಿತ ಕಾಲೇಜಿಗೆ ವರ್ಗಾವಣೆ ಹೊಂದಿದ ಪಕ್ಷದಲ್ಲಿ ವರ್ಗಾವಣೆ ಆದೇಶವನ್ನು ಸೇವಾವಹಿಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
17. ಉಪನ್ಯಾಸಕರುಗಳು ಎಫ್.ಐ.ಪಿ. ಮೇಲೆ ತೆರಳದ ಪಕ್ಷದಲ್ಲಿ, ಪಿಹೆಚ್.ಡಿ., ಪದವಿಯನ್ನು ಪಡೆದ/ ಇಲ್ಲದ ಬಗ್ಗೆ ನಮೂದುಗಳನ್ನು ಸೇವಾವಹಿಯಲ್ಲಿ ದಾಖಲಿಸತಕ್ಕದ್ದು. ಪಿ.ಹೆಚ್.ಡಿ., ಪಡೆದಿಲ್ಲದ ಪಕ್ಷದಲ್ಲಿ ವೇತನವನ್ನು ಬಡ್ಡಿಯೊಂದಿಗೆ ಸರ್ಕಾರಕ್ಕೆ ಪಾವತಿಸಿ ಲೆಕ್ಕಾಚಾರಪಟ್ಟಿಯೊಂದಿಗೆ ಚಲನ್‌ನ್ನು ಸೇವಾವಹಿಯಲ್ಲಿ ಲಗತ್ತಿಸತಕ್ಕದ್ದು. ಈ ಬಗ್ಗೆ ದಾಖಲೆಗಳನ್ನು ಕೂಡ ಸೇವಾವಹಿಯಲ್ಲಿ ನಮೂದಿಸತಕ್ಕದ್ದು.
18. ಖಾಸಗಿ ಅನುದಾನಿತ ಬೋಧಕ/ ಬೋಧಕೇತರ ಸಿಬ್ಬಂದಿಗಳು ವಿಶ್ವವಿದ್ಯಾಲಯಗಳಲ್ಲಿ ನಿಯೋಜನೆಗೊಂಡ ಪಕ್ಷದಲ್ಲಿ ನಿಯೋಜನೆ ಅವಧಿಗೆ ನಿಯಮಾನುಸಾರ ಪಿಂಚಣಿ ವಂತಿಕೆ ಹಾಗೂ ರಜಾ ವಂತಿಕೆಗಳನ್ನು ಸಂಬಂಧಿಸಿದ ಸರ್ಕಾರದ ಲೆಕ್ಕ ಶೀರ್ಷಿಕೆಗಳಿಗೆ ಸಂದಾಯ ಮಾಡತಕ್ಕದ್ದು. ಈ ಬಗ್ಗೆ ಸೇವಾವಹಿಯಲ್ಲಿ ದಾಖಲೆಗಳನ್ನು ನಮೂದಿಸಿ, ಲೆಕ್ಕಾಚಾರಪಟ್ಟಿಯೊಂದಿಗೆ ಮೂಲ ಚಲನ್‌ನ್ನು ಸೇವಾವಹಿಯಲ್ಲಿ ಲಗತ್ತಿಸತಕ್ಕದ್ದು.
19. ಪಿಂಚಣಿ ಮಂಜೂರಾತಿ ಸಂಬಂಧ ನಿವೃತ್ತಿ ಹೊಂದಲಿರುವವರ ವೇತನವನ್ನು ಕಾಲೇಜು ವೇತನಾನುದಾನಕ್ಕೊಳಪಟ್ಟ ದಿನಾಂಕದಿಂದ ಕಾಲ್ಪನಿಕವಾಗಿ ನಿಗದೀಕರಣ ಮಾಡಿರುವ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯ ಆದೇಶವನ್ನು ಸೇವಾವಹಿಯಲ್ಲಿ ನಮೂದಿಸಿ ಕಾಲೇಜು ಪ್ರಾಂಶುಪಾಲರು ದೃಢೀಕರಿಸತಕ್ಕದ್ದು. ಮೂಲ ಆದೇಶವನ್ನು ಸೇವಾವಹಿಯಲ್ಲಿ ಲಗತ್ತಿಸತಕ್ಕದ್ದು.
20. ಉಪನ್ಯಾಸಕರುಗಳ ಹಿರಿಯ ವೇತನ ಶ್ರೇಣಿ/ ಆಯ್ಕೆ ವೇತನ ಶ್ರೇಣಿ ಸ್ಥಾನೀಕರಣದ ಸಂಬಂಧ ಆಯುಕ್ತರ ಕಛೇರಿಯಿಂದ ಆದೇಶ/ ಮಾರ್ಪಾಡು ಆದೇಶವಾಗಿದ್ದಲ್ಲಿ ಸದರಿ ಆದೇಶದ ಪ್ರತಿಯನ್ನು ಸೇವಾವಹಿಯಲ್ಲಿ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
21. ಡಿ.ಎಸ್.ಇ.ಆರ್.ಟಿ.ಯಿಂದ ವೇತನಾನುದಾನ ಪಡೆದ ಅವಧಿಗೆ ಸಂಬಂಧಿಸಿದಂತೆ ಸೇವಾಪುಸ್ತಕದಲ್ಲಿ ಪ್ರತ್ಯೇಕವಾದ ಟಿ.ಬಿ.ಎಸ್. ಪ್ರಮಾಣ ಪತ್ರಗಳನ್ನು ನಮೂದಿಸಿ, ಸದರಿ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಅಧಿಕಾರಿಗಳಿಂದ ಮೇಲುರುಜು ಮಾಡಿಸುವುದು. ಕಾಲೇಜು ಶಿಕ್ಷಣ ಇಲಾಖೆಯಿಂದ ವೇತನಾನುದಾನ ಪಡೆದ ಅವಧಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಟಿ.ಬಿ.ಎಸ್. ಪ್ರಮಾಣ ಪತ್ರಗಳನ್ನು ನಮೂದಿಸಿ ದೃಢೀಕರಿಸಿ, ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಮೇಲುರುಜು ಮಾಡಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಬಿ.ಎಡ್. ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಸಲಾಗಿದೆ.
22. ದಿನಾಂಕ:01-04-2006ರ ನಂತರ ನೇಮಕಾತಿ ಹೊಂದಿದ/ ಅನುದಾನಕ್ಕೊಳಪಟ್ಟ ಖಾಸಗಿ ಅನುದಾನಿತ ಸಿಬ್ಬಂದಿಗಳು ಹೊಸ ಪಿಂಚಣಿ ಯೋಜನೆ ವ್ಯಾಪ್ತಿಗೆ ಒಳಪಡುವ ಕಾರಣ ಅಂತಹ ಸಿಬ್ಬಂದಿಗಳು ವಯೋನಿವೃತ್ತಿ ಹೊಂದಿದ ಪಕ್ಷದಲ್ಲಿ ಪಿಂಚಣಿ ಪ್ರಸ್ತಾವನೆಯನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.

ಈ ಸಂಬಂಧದಲ್ಲಿ ಯಾವುದೇ ವಿಳಂಬಕ್ಕೆ ಎಡೆಮಾಡಿಕೊಡದೇ ಪಿಂಚಣಿ ಪ್ರಸ್ತಾವನೆಗಳನ್ನು ನಿಗದಿತ ಸಮಯದೊಳಗಾಗಿ ಜಂಟಿ ನಿರ್ದೇಶಕರುಗಳ ಕಛೇರಿಗೆ ಕಳುಹಿಸಲು ಕ್ರಮಕೈಗೊಳ್ಳಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ತಪ್ಪಿದಲ್ಲಿ ಪಿಂಚಣಿ ಇತ್ಯರ್ಥದಲ್ಲಿ ಆಗುವ ವಿಳಂಬಗಳಿಗೆ ಪ್ರಾದೇಶಿಕ ಜಂಟಿ ನಿರ್ದೇಶಕರು/ ಕಾಲೇಜು ಆಡಳಿತ ಮಂಡಳಿ/ ಕಾಲೇಜು ಪ್ರಾಂಶುಪಾಲರುಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಈ ಸೂಚನೆಯನ್ನು ಸಂಬಂಧಿಸಿದ ಎಲ್ಲಾ ಬೋಧಕರ ಹಾಗೂ ಬೋಧಕೇತರರ ಗಮನಕ್ಕೆ ತಂದು ಕಾಲೇಜಿನ ಎಲ್ಲಾ ನೌಕರರಿಗೂ ಅನುಕೂಲ ಮಾಡಿಕೊಡುವಂತೆ ಸೂಚಿಸಲಾಗಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)**

**ಇವರಿಗೆ:-**

1. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಗುಲ್ಬರ್ಗಾ, ಶಿವಮೊಗ್ಗ ಹಾಗೂ ಧಾರವಾಡ – ಮಾಹಿತಿ ಹಾಗೂ **ಅನುದಾನಿತ ಕಾಲೇಜುಗಳ ಸಿಬ್ಬಂದಿಗಳ ಪಿಂಚಣಿ ಪ್ರಸ್ತಾವನೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಯಾವುದೇ ನ್ಯೂನತೆಗಳು ಇಲ್ಲದಿರುವುದನ್ನು ಖಾತರಿಪಡಿಸಿಕೊಂಡು, ಅಗತ್ಯವಿರುವೆಡೆಯೆಲ್ಲೆಲ್ಲಾ ಸಹಿ ಹಾಗೂ ಮೊಹರಿನೊಂದಿಗೆ ದೃಢೀಕರಿಸಿ ಕೇಂದ್ರ ಕಛೇರಿಗೆ ರವಾನಿಸಲು ಸೂಚಿಸಲಾಗಿದೆ** ಹಾಗೂ ತಮ್ಮ ಕಛೇರಿ ವ್ಯಾಪ್ತಿಯ ಎಲ್ಲಾ ಖಾಸಗಿ ಅನುದಾನಿತ ಪದವಿ, ಬಿ.ಎಡ್. ಹಾಗೂ ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಸುತ್ತೋಲೆಯನ್ನು ರವಾನಿಸುವುದು.
2. ಆಯುಕ್ತರ ಆಪ್ತಶಾಖೆ/ ನಿರ್ದೇಶಕರ ಆಪ್ತತಶಾಖೆ/ ಹೆಚ್ಚುವರಿ ನಿರ್ದೇಶಕರ ಆಪ್ತಶಾಖೆ/ ಜಂಟಿ ನಿರ್ದೇಶಕರ ಆಪ್ತಶಾಖೆ / ಮುಖ್ಯ ಆಡಳಿತಾಧಿಕಾರಿಗಳ ಆಪ್ತಶಾಖೆ ಕೇಂದ್ರ ಕಛೇರಿ, ಕಾ.ಶಿ.ಇ., ಬೆಂಗಳೂರು – ಮಾಹಿತಿಗಾಗಿ
3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾ.ಶಿ.ಇ., ಬೆಂಗಳೂರು – ಮಾಹಿತಿ ಹಾಗೂ ಈ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
4. ಹೆಚ್ಚುವರಿ ಪ್ರತಿ.
5. ಕಛೇರಿ ಪ್ರತಿ.